

ಬಿಸಿಲು
ಬೆಳದಿಂಗಳು

ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ
swamiji@taralabalu.org

# 'ಮುಂಜಾವಿಗೊಂದು ನುಡಿಕಿರಣ'

ಯಾವುದೇ ಪುಸ್ತಕವಿರಲಿ ಅದಕ್ಕೊಂದು ಮುನ್ನುಡಿ ಇರುತ್ತದೆ. ಊರ ಮುಂದೆ ಅಗಸೇ ಬಾಗಿಲು ಇರುವಂತೆ. ಮುನ್ನುಡಿ ವಾಸ್ತವವಾಗಿ ಹಿನ್ನುಡಿ. ಗ್ರಂಥಕರ್ತರು ತಮ್ಮ ಪುಸ್ತಕವನ್ನು ಬರೆದು ಮುಗಿಸಿದ ಮೇಲೆ ಅವರ ಗೌರವಾದರಗಳಿಗೆ ಪಾತ್ರರಾದವರು ನಂತರ ಬರೆಯುವ ನುಡಿ. ಪುಸ್ತಕವು ಓದುಗರ ಕೈಗೆ ಸೇರಿದಾಗ ಮಾತ್ರ ಅದು ಮೊದಲ ನುಡಿಯಾಗಿ ಗೋಚರಿಸುತ್ತದೆ. ಯಾವುದೇ ಪುಸ್ತಕಕ್ಕೆ ಮುನ್ನುಡಿ ಬರೆಯುವವರು ನಮ್ಮ ಅಭಿಪ್ರಾಯದಲ್ಲಿ ಆ ಪುಸ್ತಕದ ಮೊದಲ ಓದುಗರು. ಪುಸ್ತಕವು ಮುದ್ರಣಾಲಯದಿಂದ ಹೊರಬರುವ ಮೊದಲೇ ಅದನ್ನು ಓದಿ ಆಸ್ವಾದಿಸುವ ಸುದೈವಿಗಳು - ಔತಣಕೂಟಕ್ಕೆ ಅತಿಥಿ ಅಭ್ಯಾಗತರು ಬರುವ ಮೊದಲು ಮನೆಯಲ್ಲಿ ಅಡುಗೆ ಮಾಡುವಾಗಲೇ ತಾಯಿಯ ಪ್ರೀತಿ, ಅಂತಃಕರಣಗಳಿಂದ ಸಿಹಿತಿನಿಸನ್ನು ಪಡೆದು ಬಾಯಿಚಪ್ಪರಿಸುವ ಮುದ್ದು ಮಕ್ಕಳಂತೆ! ಅಂತಹ ರಸಾಸ್ವಾದ ನಮಗೆ ಉಂಟಾಗಿದ್ದು "ಮುಂಜಾವಿಗೊಂದು ನುಡಿಕಿರಣ" ಎಂಬ ಗ್ರಂಥದ ಕರಡು ಪ್ರತಿ ಕೈಸೇರಿದಾಗ. ಇದಕ್ಕೆ ನಮ್ಮಿಂದ ಒಂದು ಮುನ್ನುಡಿಯನ್ನು ಅಪೇಕ್ಷಿಸಿ ಗ್ರಂಥಕರ್ತರಾದ ನಿವೃತ್ತ ನ್ಯಾಯಮೂರ್ತಿ ಶಿವರಾಜ ಪಾಟೀಲರು ದೂರವಾಣಿ ಕರೆಮಾಡಿ ಒಂದೆರಡು ತಿಂಗಳುಗಳೇ ಆದವು. ಕರಡು ಪ್ರತಿ ಕೈಸೇರಿದಾಗ ಬರೆಯಲು ಸಾಕಷ್ಟು ಸಮಯವಿದೆ ಎನಿಸಿದ್ದರೂ ಸಮಯ ಕಳೆದದ್ದು ಗೊತ್ತೇ ಆಗಲಿಲ್ಲ. ನ್ಯಾಯಾಲಯಗಳಲ್ಲಿ ವಕೀಲರು adjournment ಕೇಳುವಂತೆ ಕಾಲಾವಕಾಶವನ್ನು ಕೇಳುತ್ತಲೇ ಬಂದೆವು. ಅವರು ಅನಿವಾರ್ಯವಾಗಿ ಮುಂಜೂರು ಮಾಡುತ್ತಲೇ ಬಂದರು. ಈ ಗ್ರಂಥದ ಬಿಡುಗಡೆ ಇದೇ 12ರಂದು ಶನಿವಾರ. ಬೆಂಗಳೂರಿನ ನಮ್ಮ ತರಳಬಾಳು ಕೇಂದ್ರದಲ್ಲಿ. ಹಿರಿಯ ಸಾಹಿತಿಗಳಾದ ಶತಾಯುಷಿ ಜಿ. ವೆಂಕಟಸುಬ್ಬಯ್ಯನವರಿಂದ 'ಸಾರ್ಥಕ ಜೀವನ' ಕುರಿತು ವಿಶೇಷ ಉಪನ್ಯಾಸ.

ಈ ಗ್ರಂಥದ ಆರಂಭದಲ್ಲಿ ಬರುವ ಗ್ರಂಥಕರ್ತರ ಅಪರೂಪದ ನುಡಿ "ಅಮೂಲ್ಯವಾದ ಸಮಯದ ಸದುಪಯೋಗ ಸಂತೋಷ ಹಾಗೂ ಯಶಸ್ಸಿಗೆ ಬುನಾದಿ". ಈ ನುಡಿಯ ಆಶಯಕ್ಕೆ ಅನುಗುಣವಾಗಿ ಸಮಯವನ್ನು ಸದುಪಯೋಗಪಡಿಸಿಕೊಳ್ಳಬೇಕು ಎಂಬ ತುಡಿತ ನಮಗಿದ್ದರೂ ನಮ್ಮ ಸಮಯವನ್ನು ನಾವು ಬಯಸಿದಂತೆ ಒಳ್ಳೆಯ ಕಾರ್ಯಗಳಲ್ಲಿ ವಿನಿಯೋಗಿಸಿಕೊಳ್ಳಲು ಸಾಧ್ಯವಾಗದ ಅಸಹಾಯಕತೆಯ ಅಸಂತುಷ್ಟಿ ನಮಗೆ ಬಹಳವಾಗಿದೆ. ನಮ್ಮ ಅನುಭವದಲ್ಲಿ ಇತ್ತೀಚೆಗೆ ಸಭೆ ಸಮಾರಂಭಗಳು ನಡೆಯುವ ರೀತಿ ಸಾರ್ವಜನಿಕ ಜೀವನದಲ್ಲಿರುವವರಿಗೆ ಒಂದು ರೀತಿಯ ಸುಸಂಸ್ಕೃತ ಶಿಕ್ಷೆ! ಇದು ನಮ್ಮೊಬ್ಬರದೇ ಅಲ್ಲ, ಸಮಯದ ಪರಿವೆಯುಳ್ಳವರೆಲ್ಲರ ಸಂಕಷ್ಟ. ಉನ್ನತ ಸ್ಥಾನಗಳಲ್ಲಿರುವವರ ಸಮಯ ಹಾಗೂ ಶ್ರಮ ಅವರು ಮಾಡಬೇಕಾದ ಕರ್ತವ್ಯಗಳಲ್ಲಿ ವಿನಿಯೋಗವಾಗದೆ ನಿರರ್ಥಕ ಹಾಗೂ ಅನುತ್ಪಾದಕವಾಗಿ (unproductive) ಪರಿಣಮಿಸುತ್ತಿವೆ. "ಸಾಸುವೆಯಷ್ಟು ಸುಖಕ್ಕೆ ಸಾಗರದಷ್ಟು ದುಃಖ ನೋಡಾ!" ಎಂದು ಅಲ್ಲಮಪ್ರಭು ಹೇಳುವಂತೆ ಕೆಲವೇ ಕೆಲವು ನಿಮಿಷಗಳ ಕಾಲ ಮಾಡಬೇಕಾದ ಭಾಷಣಕ್ಕೆ ನೂರಾರು ಕಿಲೋಮೀಟರ್‌ಗಳ ಪ್ರಯಾಸದ ಪ್ರಯಾಣ. ಅದರಲ್ಲೂ ಶಿಷ್ಯರ ಒತ್ತಾಸೆಗೆ ಮಣಿದು ಗ್ರಾಮೀಣ ಪ್ರದೇಶದ ಕಾರ್ಯಕ್ರಮಗಳಲ್ಲಿ ಭಾಗವಹಿಸಲು ಹಳ್ಳಿಯ ಕೆಟ್ಟ ರಸ್ತೆಗಳಲ್ಲಿ ನಿತ್ಯ ಓಡಾಡುವ ನಮಗೆ ಒಂದು ರೀತಿಯ ಜೀವಾವಧಿ ಶಿಕ್ಷೆಯ ಸಿಹಿ ಅನುಭವ. ಆದರೆ ಸಮಾರಂಭದ ಸ್ಥಳಕ್ಕೆ ಹೋದ ಮೇಲೆ ಶಿಷ್ಯರು ತೋರುವ ಅಪರಿಮಿತ ಶ್ರದ್ಧಾ ಭಕ್ತಿಗೌರವಗಳು ಪ್ರಯಾಣದ ದಣಿವೆಲ್ಲವನ್ನೂ ಮರೆಸಿಬಿಡುತ್ತವೆ - ಹುಟ್ಟಿದ ಮಗುವನ್ನು ನೋಡಿ ತಾಯಿ ಪ್ರಸವವೇದನೆಯನ್ನು ಮರೆಯುವಂತೆ!

ಅದೇನೇ ಇರಲಿ, ಕೈಗೆ ಸಿಕ್ಕ ಸಿಹಿತಿನಿಸನ್ನು ಬೇರೆಯವರಿಗೆ ಕೊಡದೆ ಒಬ್ಬರೇ ತಿನ್ನುವ ಮಕ್ಕಳಂತೆ ಕಾರಿನಲ್ಲಿ ಪ್ರಯಾಣಿಸುವಾಗ ಈ ಗ್ರಂಥವನ್ನು ಪಕ್ಕದಲ್ಲಿಟ್ಟುಕೊಂಡು ಆಮೂಲಾಗ್ರವಾಗಿ ಓದಿ ಆನಂದಿಸಿದ್ದೇವೆ. "ಮುಂಜಾವಿಗೊಂದು ನುಡಿಕಿರಣ" ದಲ್ಲಿ 365 ನುಡಿಗಟ್ಟುಗಳಿವೆ. ವರ್ಷದಲ್ಲಿ ದಿನವೊಂದಕ್ಕೆ ಒಂದು ನುಡಿಯಂತೆ. ಹಾಗೆಂದು ದಿನಕ್ಕೆ ಒಂದೇ ಒಂದು ನುಡಿಯನ್ನು ಮಾತ್ರ ಓದಿದರೆ ಈ ಪುಸ್ತಕವನ್ನು ಓದಿ ಮುಗಿಸಲು ಒಂದು ವರ್ಷ ಬೇಕಾಗುತ್ತದೆ. ಆದರೆ ಒಮ್ಮೆಲೇ ಓದಿ ಮುಗಿಸಿದರೆ ಮಾಗಿದ ಜೀವವೊಂದರ ಎಷ್ಟೋ ವರ್ಷಗಳ ಜೀವನಾನುಭವ ಓದುಗರಿಗೆ ಒಂದೇ ದಿನದಲ್ಲಾಗುತ್ತದೆ.

ನಮ್ಮ ದೃಷ್ಟಿಯಲ್ಲಿ "to remain un-corrupt in the corrupt society is a big challenge!" ಅಂತಹ ಸವಾಲನ್ನು ಸ್ವೀಕರಿಸಿ ಸಾರ್ವಜನಿಕ ಬದುಕಿನಲ್ಲಿ ಶುದ್ಧ ಚಾರಿತ್ರ್ಯವನ್ನು ಅತ್ಯಂತ ಜತನದಿಂದ ಕಾಯ್ದುಕೊಂಡು ಬಂದ ಶ್ರೇಷ್ಠ ನ್ಯಾಯಾಲಯದ ನಿವೃತ್ತ ನ್ಯಾಯಮೂರ್ತಿಗಳಾದ ಶಿವರಾಜ ಪಾಟೀಲರು ಈ ದೇಶ ಕಂಡ ಅಪರೂಪದ ನ್ಯಾಯಮೂರ್ತಿಗಳು. ನಿಷ್ಕಳಂಕ ವ್ಯಕ್ತಿತ್ವವನ್ನು ಹೊಂದಿದವರು; ತಮ್ಮ ಬದುಕಿನಲ್ಲಿ ಜೀವನಾದರ್ಶಗಳನ್ನು ಮೈಗೂಡಿಸಿಕೊಂಡು ಬಂದವರು. ಅವರ ಜೀವನಾನುಭವದ ಮೂಸೆಯಲ್ಲಿ ಬೆಂದು ಪರಿಪಕ್ವಗೊಂಡ ಅನೇಕ ಅಪರೂಪದ ವಿಚಾರಗಳು ಇಲ್ಲಿ ಹರಳುಗಟ್ಟಿವೆ. ಇಲ್ಲಿಯ ಉಪದೇಶಾಮೃತದ ಮಾತುಗಳು ಸಂಸ್ಕೃತದ ಸುಭಾಷಿತಗಳನ್ನು ಮತ್ತು ಶರಣರ ವಚನಗಳನ್ನು ನೆನಪಿಗೆ ತರುತ್ತವೆ. ಇಲ್ಲಿರುವ ಸಂದೇಶಗಳ ಹರವು ಸ್ಥೂಲವಾಗಿ ವ್ಯಕ್ತಿ, ಸಮಾಜ ಮತ್ತು ದೇಶ. ಇಲ್ಲಿ ಆಧ್ಯಾತ್ಮಿಕ ಚಿಂತನೆ ಮತ್ತು ಸಾಮಾಜಿಕ ಚಿಂತನೆ ಎರಡೂ ಇವೆ. ಬದುಕಿನ ಎಲ್ಲ ರಂಗಗಳಲ್ಲಿರುವವರಿಗೆ ಬೇಕಾದ

- 2 -

ಮಾರ್ಗದರ್ಶನವಿದೆ. ಈ ನುಡಿಗಳಲ್ಲಿ ವೈಚಾರಿಕತೆಯ ಮೊನೆಚು ಇದೆ; ಅದರ ಜೊತೆಗೆ ವಿಡಂಬನೆ ಹಾಗೂ ವಿನೋದದ ಲಹರಿಯೂ ಇದೆ. ಉದಾಹರಣೆಗೆ ಈ ಮುಂದಿನ ನುಡಿಗಟ್ಟುಗಳನ್ನು ನೋಡಿ:

- ಜ್ಞಾನ ಹೊಂದಿದ ಮನುಷ್ಯ ಒಬ್ಬ ಒಳ್ಳೆಯ ವಾಗ್ಮಿಯಾಗುತ್ತಾನೆ; ವಿವೇಚನಾರಹಿತವಾಗಿ ಮಾತನಾಡಿದರೆ ಕೇವಲ ಧ್ವನಿವರ್ಧಕನಾಗುತ್ತಾನೆ.
- ಕೆಲವರು ಆಹಾರಕ್ಕಾಗಿ ಮೈಲುಗಟ್ಟಲೆ ನಡೆಯುತ್ತಾರೆ, ಇನ್ನು ಕೆಲವರು ಆಹಾರದ ಪಚನಕ್ಕಾಗಿ ಮೈಲುಗಟ್ಟಲೆ ನಡೆಯುತ್ತಾರೆ.
- ಮೆಟ್ಟಿಲುಗಳನ್ನು ಒಂದೊಂದಾಗಿ ಹತ್ತಿ ಕೊನೆಯ ಮಹಡಿಗೆ ತಲುಪಿದ ಅನುಭವ ಲಿಫ್ಟಿನಲ್ಲಿ ಏರಿದ ಅನುಭವಕ್ಕಿಂತ ತೀರಾ ಭಿನ್ನ.
- ಕಾನೂನನ್ನು ಮುರಿದ ಕ್ರೂರ ಅಪರಾಧಿಗೆ ಅನಾವಶ್ಯಕ ಅನುಕಂಪ ತೋರಿಸುವುದೆಂದರೆ ಪೀಡಿತನನ್ನೇ ಪೀಡಿಸಿದಂತಾಗುತ್ತದೆ.
- ಅನೇಕರು ಶಾಸ್ತ್ರವಿಧಿಗಳನ್ನು ಧರ್ಮವೆಂದು ತಿಳಿದುಕೊಂಡಿದ್ದಾರೆ. ಅವು ಬಾಳೆಹಣ್ಣಿನ ಸಿಪ್ಪೆ ಇದ್ದಂತೆ.

ಈ ಹೋಲಿಕೆಯನ್ನು ಮುಂದುವರೆಸಿ ಹೇಳಬಹುದಾದರೆ ಇಂದು ವಿವಿಧ ಧರ್ಮೀಯರು ತಮ್ಮ ಧರ್ಮದಲ್ಲಿರುವ ಆಧ್ಯಾತ್ಮಿಕ ತಿರುಳನ್ನು ಸವಿಯದೆ ಅದರ ಮೇಲಿರುವ ಸಿಪ್ಪೆಯನ್ನು ದಾರಿಯಲ್ಲಿ ಎಸೆದು ಅಮಾಯಕರು ಜಾರಿಬೀಳುವಂತೆ ಮಾಡುತ್ತಿದ್ದಾರೆ.

ನ್ಯಾ. ಶಿವರಾಜ ಪಾಟೀಲರು ಸದಾ ಸತ್ಯಶೋಧಕರು. ಲಭ್ಯವಿರುವ ಸಾಕ್ಷ್ಯಾಧಾರಗಳ ಮೇಲೆ ಮಿಥ್ಯಾರೋಪಗಳ ಹುತ್ತವನ್ನು ಬಗಿದು ನಿಜಸಂಗತಿಯನ್ನು ಕಂಡುಕೊಳ್ಳುವ ಸತ್ಯದ್ರಷ್ಟಾರರು. ಅವರದು ಮುಚ್ಚಿದ ಹೃದಯವಲ್ಲ, ಹೊಸ ಹೊಸ ಸಾಕ್ಷ್ಯಾಧಾರಗಳಿಗೆ ಸದಾ ತೆರೆದುಕೊಂಡಿರುವ ಹೃದಯ. ಜೀವನಾದರ್ಶಗಳನ್ನು ಮೈಗೂಡಿಸಿಕೊಂಡು ಅವರು ರಚಿಸಿದ "ಮುಂಜಾವಿಗೊಂದು ನುಡಿಕಿರಣ"ವನ್ನು ಇತರ ಗ್ರಂಥಗಳಂತೆ ಮೊದಲನೆಯ ಪುಟದಿಂದಲೇ ಓದಬೇಕೆಂದೇನೂ ಇಲ್ಲ, ಬೆಲ್ಲದಚ್ಚನ್ನು ಯಾವ ಕಡೆಯಿಂದ ಮೆದ್ದರೂ ಸಿಹಿಯಾಗಿಯೇ ಇರುವಂತೆ ಯಾವ ಪುಟದ ಯಾವ ನುಡಿಗಟ್ಟನ್ನು ಆಸ್ವಾದಿಸಿದರೂ ಸಹೃದಯ ಓದುಗರ ಬದುಕಿಗೆ ಸನ್ಮಾರ್ಗ ದೊರೆಯುತ್ತದೆ. ದೊಡ್ಡ ದೊಡ್ಡ ಪುಸ್ತಕಗಳನ್ನು ಓದಿದಾಗ ಆಗುವ ಅನುಭವಕ್ಕಿಂತ ಇಂತಹ ಚಿಕ್ಕ ಚಿಕ್ಕ ನುಡಿಗಟ್ಟುಗಳನ್ನು ಓದುವಾಗ ಉಂಟಾಗುವ ಅನುಭವ ವಿಶಿಷ್ಟ: ಅದು ಓದುಗನ ಮನಸ್ಸಿನಲ್ಲಿ ಒಳ್ಳೆಯ ಚಿಂತನೆಯ ಬೀಜವನ್ನು ಬಿತ್ತಿದಂತೆ!

10.1.2013

ಶ್ರೀ ತರಳಬಾಳು ಜಗದ್ಗುರು
ಡಾ॥ ಶಿವಮೂರ್ತಿ ಶಿವಾಚಾರ್ಯ ಮಹಾಸ್ವಾಮಿಗಳವರು
ಸಿರಿಗೆರೆ

❑